ಹೇಮಾವತಿ ಜಲಾಶಯ ಮುಳುಗಡೆ ಪ್ರದೇಶವೆಂದು ಘೋಷಣೆ.

3093 - ಶ್ರೀ ಬಿ.ಆರ್. ಗುರುದೇವ. (ಆಲೂರು) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರು ತಾಲ್ಲೂಕು ವ್ಯಾಪ್ತಿಗೆ ಬರುವ 14 ಗ್ರಾಮಗಳು ಹೇಮಾವತಿ ಜಲಾಶಯ ಯೋಜನೆಯಿಂದ ಮುಳುಗಡೆಯಾಗಿರುವುದು ನಿಜವಲ್ಲವೇ?

ಆ) ಹೇಮಾವತಿ ಜಲಾಶಯ ಯೋಜನೆಯ ಮುಖ್ಯ ಅಭಿಯಂತರವರು ಈ ಗ್ರಾಮಗಳನ್ನು ಮುಳುಗಡೆ ಪ್ರದೇಶವೆಂದು ಘೋಷಿಸಲ್ಪಡುವಂತೆ ಶಿಫಾರಸ್ಸು ಮಾಡಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದಕ್ಕಾಗಿ ಮಂಜೂರಾತಿ ಆಗಿದೆಯೇ?

ಈ) ಪರಿಹಾರ ಮಂಜೂರಾತಿ ಆಗಿರದಿದ್ದಲ್ಲಿ ಕೂಡಲೇ ಇದರ ಬಗ್ಗೆ ಕ್ರಮಕೈಗೊಳ್ಳಲಾಗುವುದೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ನಿಜ

ಆ) ಬಂದಿದೆ.

ಇ) ಆಗಿದೆ

ಈ) ಉದ್ಭವಿಸುವುದಿಲ್ಲ.

ಏತ ನೀರಾವರಿ ಯೋಜನೆಗಳು

3088 - ಡಾ.ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ದೇವರ ಹೊನ್ನಾಳಿಯ ಹತ್ತಿರ ಏತ ನೀರಾವರಿಯೋಜನೆಯನ್ನು ಸರ್ಕಾರವು ಕೈಗೆತ್ತಿಕೊಳ್ಳುವುದೇ,

ಆ) ಹಾಗಿದ್ದಲ್ಲಿ.ಈ ಯೋಜನೆಯು ಯಾವ ಹಂತದಲ್ಲಿದೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಹೌದು

ಆ) ದೇವರ ಹೊನ್ನಳಿಳಿ ಏತ ನೀರಾವರಿ ಯೋಜನೆಯ ಯೋಜನಾ ವರದಿಯನ್ನು ನಬಾರ್ಡ್ ನಿಯಮಗಳ ಪ್ರಕಾರ ಬ್ಯಾಂಕಿನಿಂದ ಸಾಲ ಸೌಲಭ್ಯ ಪಡೆಯಲು ತಯಾರಿಕೆ ಹಂತದಲ್ಲಿದೆ.

ಸಿದ್ಧಾಪುರ ಮಂಡಲ ಪಂಚಾಯ್ತಿಯಲ್ಲಿ ಶೇಕಡಾ 18ಹಣ ಖರ್ಚು ಮಾಡದೇಇರುವ ಕುರಿತು.

3187 - ಶ್ರೀ ಗೋಪಾಲಮುಕುಂದ ಕಾನಡೆ (ಸಿರಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲಾ ಸಿದ್ಧಾಪುರ ಮಂಡಲ ಪಂಚಾಯತಿಯಲ್ಲಿ ಈ ವರೆಗೆ ಶೇಕಡ 18 ರಷ್ಟು ಹಣವನ್ನು ಹರಿಜನ ಗಿರಿಜನರಿಗೆ ನೀಡದೆ ಬಾಕಿ